# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ ಸಂಖ್ಯೆ.29 ಕಾಚರಕನಹಳ್ಳಿ (ಹೊಸ ವಾರ್ಡ್ ಸಂಖ್ಯೆ.99) ವಾರ್ಡಿಗೆ ಸಂಬಂಧಿಸಿದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಕುವೆಂಪು ಪಾರ್ಕ್ ಪಕ್ಕದಲ್ಲಿರುವ ಪಾಲಿಕೆ ಕಟ್ಟಡದಲ್ಲಿ ದಿನಾಂಕ: 21-12-2022 ರಂದು ನಡೆದ ವಾರ್ಡ್ ಕಮಿಟಿ ಸಭೆಯ ನಡವಳಿಗಳು

**ಹಾಜರಿದ್ದ ಸದಸ್ಯರು,**

1. ಶ್ರೀಮತಿ ಶಾಂತ.ಬಿ, ಅಧ್ಯಕ್ಷರು, ವಾರ್ಡ್ ಸಮಿತಿ ನೋಡೆಲ್ ಅಧಿಕಾರಿಗಳು,
2. ಶ್ರೀ ಹೆಚ್.ವಿ.ಕೃಷ್ಣಾರೆಡ್ಡಿ, ಸದಸ್ಯ ಕಾರ್ಯದರ್ಶಿ ಮತ್ತು ಸಂಚಾಲಕರು,
3. ವೈದ್ಯಾಧಿಕಾರಿಗಳು, ವಾರ್ಡ್ ಸಂಖ್ಯೆ.29, ಕಾಚರಕನಹಳ್ಳಿ,
4. ಶ್ರೀಮತಿ ವಿನುತ, ಸದಸ್ಯರು,
5. ಶ್ರೀಮತಿ ಸರಸ್ವತಿ, ಸದಸ್ಯರು, ಜಲವಾಯು ವಿಹಾರ್ ಅಸೋಸಿಯೇಷನ್(ರಿ)
6. ಶ್ರೀ ಪಿಳ್ಳಪ್ಪ (ಅಧ್ಯಕ್ಷರು, ರಾಮಯ್ಯ ಬಡಾವಣೆ ನಿವಾಸಿಗಳ ಸಂಘ),

**ಹಾಜರಿದ್ದ ಅಧಿಕಾರಿಗಳು**

1. ಶ್ರೀ ರವಿ, ಕಂದಾಯ ನಿರೀಕ್ಷಕರು,
2. ಶ್ರೀ ಹನುಮಂತಪ್ಪ, ಹಿರಿಯ ಆರೋಗ್ಯ ನಿರೀಕ್ಷಕರು,
3. ಮಾರ್ಷಲ್, ವಾರ್ಡ್ ಸಂಖ್ಯೆ.29, ಕಾಚರಕನಹಳ್ಳಿ,
4. ಸಹಾಯಕ ಸಬ್ ಇನ್ಸ್‌ಪೆಕ್ಟರ್ (ಸಂಚಾರ ಮತ್ತು ಕಾನೂನು ಮತ್ತು ಸುವ್ಯವಸ್ಥೆ) ಬಾಣಸವಾಡಿ ಪೋಲೀಸ್ ಠಾಣೆ,
5. ಶ್ರೀ ರಾಜಶೇಖರ್, ಕಂದಾಯ ನಿರೀಕ್ಷಕರು,
6. ಶ್ರೀಮತಿ ರಾಜೇಶ್ವರಿ, ಕಲ್ಯಾಣ ಇಲಾಖೆ,
7. ಸಂಗೀತಾ, ಸಹಾಯಕ ಅಭಿಯಂತರರು, ಬಿಡಬ್ಲ್ಯೂ.ಎಸ್.ಎಸ್.ಬಿ
8. ಕಿರಿಯ/ಸಹಾಯಕ ಅಭಿಯಂತರರು, ಬೆಸ್ಕಾಂ ಇಲಾಖೆ,

ವಾರ್ಡ್ ಸಮಿತಿಯ ಪ್ರಾಸ್ತಾವಿಕ ಸಭೆಯ ಉದ್ದೇಶವನ್ನು ತಿಳಿಸಿ, ಸಭೆಯಲ್ಲಿ ಉಪಸ್ಥಿತರಿದ್ದ ಅಧ್ಯಕ್ಷರು ಸದಸ್ಯರು ಹಾಗೂ ಎಲ್ಲಾ ಅಧಿಕಾರಿಗಳನ್ನು ಸ್ವಾಗತಿಸಿ, ಸಭೆಯನ್ನು ನಡೆಸಲು ವಾರ್ಡ್ ಸಮಿತಿ ಅಧ್ಯಕ್ಷರನ್ನು ಕೋರಲಾಯಿತು.

**ಸಭೆಯ ನಡವಳಿಗಳು**

1) **ಘನತ್ಯಾಜ್ಯ ನಿರ್ವಹಣೆ:-** ಯಾವುದೇ ಸಮಸ್ಯೆ ಇರುವುದಿಲ್ಲ.

2) **ಬೀದಿ ದೀಪಗಳ ನಿರ್ವಹಣೆ:-** ಯಾವುದೇ ಸಮಸ್ಯೆ ಇರುವುದಿಲ್ಲ.

- **ಶ್ರೀಮತಿ ವಿನುತ, ಸದಸ್ಯರು ರವರು ಮಾತನಾಡಿ:-** ಬಿಡಿಎ ಬಡಾವಣೆಯಲ್ಲಿ ವಿದ್ಯುತ್ ಐ ಮಸ್ತ್ ಲೈಟ್ ಕಂಬದಲ್ಲಿ ಒಟ್ಟು 06 ವಿದ್ಯುತ್ ದೀಪಗಳು ಇದ್ದು, ಕೇವಲ 02 ಮಾತ್ರ ಉರಿಯುತ್ತಿರುತ್ತದೆ ಎಂದು ಸಭಾ ಗಮನಕ್ಕೆ ತಂದಾಗ ಸಭೆಯಲ್ಲಿ ಹಾಜರಿದ್ದ ಬೀದಿ ದೀಪಗಳ ನಿರ್ವಹಣೆ ವಿಭಾಗದ ಅಭಿಯಂತರರು ದುರಸ್ತಿ ಪಡಿಸುವುದಾಗಿ ಸಭೆಗೆ ತಿಳಿಸಿದರು.

3) **ಬೃಹತ್ ನೀರುಗಾಲುವೆ:-** ಯಾವುದೇ ಸಮಸ್ಯೆ ಇರುವುದಿಲ್ಲ.

4) **ಆರೋಗ್ಯ ಇಲಾಖೆ:-**

- **ಆರೋಗ್ಯ ವೈದ್ಯಾಧಿಕಾರಿಗಳು ಮಾತನಾಡಿ:-** ಎಲ್ಲಾ ಕೋವಿಡ್ ಸಂಬಂಧಿಸಿದ ಪರೀಕ್ಷೆಗಳನ್ನು ಸದ್ಯಕ್ಕೆ ನಿಲ್ಲಿಸಲಾಗಿದ್ದು, ವ್ಯಾಕ್ಸಿನೇಷನ್, ಬೂಸ್ಟರ್ ವ್ಯಾಕ್ಸಿನೇಷನ್ ಮಾತ್ರ ಮಾಡಲಾಗುತ್ತಿರುತ್ತದೆ, ಹಾಗೂ ಯಾವುದೇ ಡೆಂಗ್ಯೂ ಫೀವರ್ ದೃಢಪಟ್ಟಿರುವುದಿಲ್ಲ ಎಂದು ಸಭೆಗೆ ತಿಳಿಸಿದರು. ಮತ್ತು

ಮಹತ್ವಾಕಾಂಕ್ಷೆಯ ಯೋಜನೆಯಾದ ನಮ್ಮ ಕ್ಲಿನಿಕ್ ಅನ್ನು ಶೀಘ್ರವಾಗಿ ಪ್ರಾರಂಭಿಸಲು ಎಲ್ಲಾ ಸಿದ್ಧತೆಗಳನ್ನು ಮಾಡಿಕೊಳ್ಳಲಾಗುವುದೆಂದು ಸಭೆಗೆ ತಿಳಿಸಿದರು.

5) **ಕಾಮಗಾರಿ ಇಲಾಖೆ:-** ಯಾವುದೇ ಸಮಸ್ಯೆ ಇರುವುದಿಲ್ಲ.

6) **ಕಂದಾಯ ಇಲಾಖೆ:-** ಯಾವುದೇ ಸಮಸ್ಯೆ ಇರುವುದಿಲ್ಲ.

7) **ಉದ್ಯಾನವನಗಳ ವಿಭಾಗ:-** ಯಾವುದೇ ಸಮಸ್ಯೆ ಇರುವುದಿಲ್ಲ.

8) **ಅರಣ್ಯ ವಿಭಾಗ:-**

- **ಶ್ರೀಮತಿ ವಿನುತ, ಸದಸ್ಯರು, ರವರು ಮಾತನಾಡಿ:-** ರಾಮಯ್ಯ ಬಡಾವಣೆ ಹಾಗೂ ಬಿಡಿಎ ಬಡಾವಣೆಯಲ್ಲಿ ಹಲವು ಕಡೆಗಳಲ್ಲಿ ಮರಗಳನ್ನು ಟ್ರಿಮ್ ಮಾಡಬೇಕಾಗಿರುತ್ತದೆ, ಮತ್ತು ಕೆಲವು ಮರಗಳ ಕೊಂಬೆಗಳು ಒಣಗಿದ್ದು, ಅವುಗಳನ್ನು ಕೂಡಲೇ ಕತ್ತರಿಸಬೇಕಾಗಿರುತ್ತದೆ ಎಂದು ಸಭೆಗೆ ತಿಳಿಸಿದಾಗ, ಸಭೆಯಲ್ಲಿ ಹಾಜರಿದ್ದ ಅರಣ್ಯ ವಿಭಾಗದ ಅಧಿಕಾರಿಗಳು ಕೂಡಲೇ ಪ್ರದೇಶವನ್ನು ಪರಿಶೀಲಿಸಿ, ಮರಗಳ ಟ್ರಿಮ್ ಮಾಡುವ ಕಾಮಗಾರಿಯನ್ನು ಕೈಗೊಳ್ಳಲು ಅರಣ್ಯ ವಿಭಾಗದವರಿಗೆ ಸೂಚಿಸಲು ಸಭೆಗೆ ತಿಳಿಸಿದರು.

9) **ಪಶುಸಂಗೋಪನೆ ವಿಭಾಗ:-** ಯಾವುದೇ ಸಮಸ್ಯೆ ಇರುವುದಿಲ್ಲ.

10) **ನೀರು ಸರಬರಾಜು:-**

- **ಮಾನ್ಯ ಅಧ್ಯಕ್ಷರು ಮಾತನಾಡಿ:-** ಕಮ್ಮನಹಳ್ಳಿ ಮುಖ್ಯರಸ್ತೆಯಲ್ಲಿ 02 ಮ್ಯಾನ್‌ಹೋಲ್‌ಗಳನ್ನು ದುರಸ್ತಿಪಡಿಸಿ, ರಸ್ತೆ ಮಟ್ಟಕ್ಕೆ ತರಬೇಕಾಗಿರುತ್ತದೆ ಹಾಗೂ ಸದರಿ ರಸ್ತೆಯಲ್ಲಿ ಎಂಪೈರ್ ಹೋಟೆಲ್ ಹತ್ತಿರ ಕಾವೇರಿ ನೀರು ಸರಬರಾಜು ವಾಲ್ವ್ ನಿಂದ ನೀರು ಸೋರಿಕೆಯಾಗಿ ರಸ್ತೆ ಹಾಳಾಗುತ್ತಿರುತ್ತದೆ. ಇದನ್ನು ಕೂಡಲೇ ದುರಸ್ತಿಪಡಿಸಲು ಸಭೆಯಲ್ಲಿ ಹಾಜರಿದ್ದ ಬಿಡಬ್ಲ್ಯೂ.ಎಸ್.ಎಸ್.ಬಿ ಅಧಿಕಾರಿಗಳಿಗೆ ಸೂಚಿಸಿದರು.

11) **ಪೊಲೀಸ್/ಸಂಚಾರ ಮತ್ತು ಕಾನೂನು ಸುವ್ಯವಸ್ಥೆ:-** ಯಾವುದೇ ಸಮಸ್ಯೆ ಇರುವುದಿಲ್ಲ.

12) **ಬೆಸ್ಕಾಂ ಇಲಾಖೆ :-**

- **ಶ್ರೀಮತಿ ವಿನುತ, ಸದಸ್ಯರು ರವರು ಮಾತನಾಡಿ:-** ಬಿಡಿಎ ಬಡಾವಣೆ ಹಾಗೂ ಆಯಿಲ್ ಮಿಲ್ ರಸ್ತೆಯಲ್ಲಿ ಹೊಸ ವಿದ್ಯುತ್ ಮೀಟರ್‌ಗಳನ್ನು ಅಳವಡಿಸಲಾಗಿದ್ದು, ಇನ್ನೂ ಬಡಾವಣೆಯಲ್ಲಿ ಹಲವು ಕಡೆ ಮೀಟರ್‌ಗಳನ್ನು ಅಳವಡಿಸುವುದು ಬಾಕಿ ಇರುತ್ತದೆ ಎಂದು ತಿಳಿಸಿದಾಗ, ಮಾನ್ಯ ಅಧ್ಯಕ್ಷರು ಮಾತನಾಡಿ, ಕೂಡಲೇ ಬಾಕಿ ಇರುವ ವಿದ್ಯುತ್ ಮೀಟರ್‌ಗಳನ್ನು ಅಳವಡಿಸಲು ಸಂಬಂಧಪಟ್ಟವರಿಗೆ ಸೂಚಿಸಲು ಆದೇಶಿಸಿದರು.

ಕೊನೆಯದಾಗಿ ಮಾನ್ಯ ಅಧ್ಯಕ್ಷರು ಮಾತನಾಡಿ, ಇಂದಿನ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಿರುವ ಎಲ್ಲಾ ನಿರ್ಣಯಗಳ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳಲು ಆದೇಶಿಸಿ, ಸಭೆಯನ್ನು ಮುಕ್ತಾಯಗೊಳಿಸಿದರು.

| | |
|---|---|
| ವಾರ್ಡ್ ಸಮಿತಿ ಸದಸ್ಯ ಕಾರ್ಯದರ್ಶಿಗಳು | ಅಧ್ಯಕ್ಷರು |
| ಸಹಾಯಕ ಅಭಿಯಂತರರು | (ನೋಡೆಲ್ ಅಧಿಕಾರಿಗಳು) |
| ವಾರ್ಡ್ ಸಂಖ್ಯೆ.29/99, ಕಾಚರಕನಹಳ್ಳಿ | ವಾರ್ಡ್ ಸಂಖ್ಯೆ.29/99, ಕಾಚರಕನಹಳ್ಳಿ |

**ಪ್ರತಿಯನ್ನು**

1) ಜಂಟಿ ಆಯುಕ್ತರು (ಪೂರ್ವ) ರವರ ಅವಗಾಹನೆಗಾಗಿ ಸಲ್ಲಿಸಿದೆ.
2) ಮುಖ್ಯ ಅಭಿಯಂತರರು (ಪೂ) ರವರ ಅವಗಾಹನೆಗಾಗಿ ಸಲ್ಲಿಸಿದೆ.
3) ಕಾರ್ಯಪಾಲಕ ಅಭಿಯಂತರರು (ಸರ್ವಜ್ಞನಗರ) ರವರ ಅವಗಾಹನೆಗಾಗಿ.
4) ವಾರ್ಡ್ ಕಮಿಟಿಯ ಸದಸ್ಯರಿಗೆ.